
ಗುನುಂಗ್ ಪದಾಂಗ್ ವಿಸ್ಮಯದ ಗುಡ್ಡದ ಮೇಲೆ ನೇಮಿಚಂದ್ರ ಮತ್ತು ಸಿ.ಜಿ. ಮಂಜುಳಾ


ಅಗ್ನಿಶಿಲೆಗಳನ್ನು ಒಂದರಿಂದ ಎರಡು ಮೀಟರ್ ಉದ್ದಕ್ಕೆ ಕತ್ತರಿಸಿ, ಸಾವಿರ ಸಂಖ್ಯೆಯಲ್ಲಿ ಅಡ್ಡಡ್ಡವಾಗಿ ಮಲಗಿಸಿ ನಿರ್ಮಿಸಿದ ಭದ್ರವಾದ ತಡೆಗೋಡೆ

ಕತ್ತಲು ಪೂರ್ಣ ಆವರಿಸಿತು, ಗಿಡಮರಗಳೆಲ್ಲ ಕಪ್ಪು ನೆರಳುಗಳಾಗಿವೆ. ದೂರದ ದಿಗಂತದ ಅಗ್ನಿಪರ್ವತ ನೇರಳೆಯ ಬಣ್ಣಕ್ಕೆ ತಿರುಗಿದೆ. ಅರೆಚಂದ್ರನ ಮಂದ ಬೆಳಕು ಹರಡಿದೆ. ತಲೆ ಎತ್ತಿ ನೋಡಿದೆ, ಸಹಸ್ರ ನಕ್ಷತ್ರಗಳು ಕಣ್ಣುಬಿಟ್ಟಿವೆ. 'ಗುನುಂಗ್ ಪದಾಂಗ್' ಸೂಡನೀಸ್ ಭಾಷೆಯ ಮೂಲದಿಂದ ಬಂದಿದೆ. ಇದರ ಅರ್ಥ 'ಜ್ಞಾನೋದಯದ ಬೆಟ್ಟ'. ಈ ಬೆಳಕಿನ ಬೆಟ್ಟ ನೋಡಲೆಂದು ಬಂದಿದ್ದೆ; ಆದರೆ, ಮಾಂತ್ರಿಕ ಸಂಜೆಯಲ್ಲಿ, ಅರೆಚಂದ್ರನ ನಸುಬೆಳದಿಂಗಳಲ್ಲಿ ಈ ಗುಡ್ಡದ ನೆತ್ತಿಯ ಮೇಲೆ ನಿಂತು, ಇಂತಹ ಮೋಹಕ ಕ್ಷಣಗಳನ್ನು ಕಳೆಯುತ್ತೇನೆಂದು ನಿರೀಕ್ಷಿಸಿರಲಿಲ್ಲ.

## ಒಂದಿಷ್ಟು ಇತಿಹಾಸ

ಡಚ್ ಈಸ್ಟ್ ಇಂಡಿಯಾ ಕಂಪನಿ, ಪಶ್ಚಿಮ ಜಾವಾದ ಈ ತಾಣಕ್ಕೆ ಗುಲಾಮಗಿರಿಯನ್ನು, ವಸಾಹತುಶಾಹಿಯನ್ನು ಎಳೆತರುವ ಮೊದಲೇ ಸ್ಥಳೀಯರಿಗೆ ಗುನುಂಗ್ ಪದಾಂಗ್ ಬಗ್ಗೆ ತಿಳಿದಿತ್ತು. ಹೊರ ಜಗತ್ತಿಗೆ ತಿಳಿದು ಬಂದದ್ದು 19ನೇ ಶತಮಾನದ ಪೂರ್ವಾರ್ಧದಲ್ಲಿ. ಇದೇ ಬೆಟ್ಟವನ್ನು 1891ರಲ್ಲಿ ಡಚ್ ಭೂವಿಜ್ಞಾನಿ ಆರ್.ಡಿ.ಎಮ್. ವೀರ್‌ಬೀಕ್ ಹಾಗೂ 1914ರಲ್ಲಿ ಡಚ್ ಪುರಾತತ್ವಶಾಸ್ತ್ರಜ್ಞ ಎನ್.ಜೆ. ಕ್ರೋಮ್ ವಿವರಿಸಿದ್ದರು. ಅದರಾಚೆಗೆ ಜಗತ್ತು ಈ ತಾಣವನ್ನು ಮರೆತಿತ್ತು.

1979ರಲ್ಲಿ ಮೂವರು ಸ್ಥಳೀಯ ರೈತರು, ದಟ್ಟ ಮರಗಿಡ ಪೊದರುಗಳ ಈ ಗುಡ್ಡವನ್ನು ಒಂದಿಷ್ಟು ಅನ್ವೇಷಿಸಿದಾಗ, ಸರಕಾರದ ಗಮನವನ್ನು ಇತ್ತ ಸೆಳೆದರು. 1980ರ ದಶಕದಲ್ಲಿ ಪುರಾತತ್ವ ಶೋಧನೆ ಆರಂಭವಾಯಿತು, ವಿಶ್ವವಿದ್ಯಾಲಯಗಳು ಅಧ್ಯಯನಕ್ಕಿಳಿದವು. ಅವರ ತನಿಖೆ, ಗುನುಂಗ್ ಪದಾಂಗ್ ಬೆಟ್ಟದ ಶಿಲಾಮೆಟ್ಟಿಲುಗಳು, ಮಾಳಿಗೆಗಳು ನಿಸ್ಸಂಶಯವಾಗಿ ಮನುಷ್ಯ ನಿರ್ಮಿತವೆಂದು ತೋರಿತು. ಗುಡ್ಡದ ನೆತ್ತಿಯ ಮೇಲಿನ ಈ ಶಿಲಾನಿರ್ಮಾಣಗಳು ಸುಮಾರು 3000 ವರ್ಷಗಳ ಹಿಂದಿನದೆಂದೂ ತಿಳಿಸಿತು.

ಗುನುಂಗ್ ಪದಾಂಗ್‌ನತ್ತ ದೇಶದ ಗಮನ ಹರಿದದ್ದು 2011ರಲ್ಲಿ. ರಾಷ್ಟ್ರಾಧ್ಯಕ್ಷರಾದ ಸುಸಿಲೋ ಬ್ಯಾಮ್‌ಬ್ಯಾಗ್ ಯುದೊಯೊನೊ ಅವರ ನಿರ್ದೇಶನದಲ್ಲಿ ಒಂದು ಅಂತರ್‌ಶಿಸ್ತೀಯ ಅಧ್ಯಯನ ತಂಡ ಈ ಸ್ಥಳವನ್ನು ಅಗೆದು ಶೋಧಿಸಲು ರೂಪುಗೊಂಡಿತು. ಈ ತಂಡದಲ್ಲಿ, 'ಇಂಡೊನೇಷಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನ ಭೂವಿಜ್ಞಾನಿಗಳು, 'ಇಂಡೊನೇಷಿಯಾ ವಿಶ್ವವಿದ್ಯಾಲಯ'ದ ಪುರಾತತ್ವಶಾಸ್ತ್ರಜ್ಞರು ಇದ್ದರು. ಈ ತಂಡದ ಪ್ರಮುಖ ಜಿಯಾಲಜಿಸ್ಟ್, ಡ್ಯಾನಿ ಹಿಲ್ಮನ್ ನಟವಿಜಯ ಮತ್ತು ಪ್ರಮುಖ ಆರ್ಕಿಯಾಲಜಿಸ್ಟ್ ಅಲಿ ಅಕ್ಬರ್.

2011ರಿಂದ 2014ರವರೆಗೆ ನಡೆಸಿದ ಪುರಾತತ್ವ ಅಗೆತಗಳು, ಕ್ಷೇತ್ರಕಾರ್ಯ ಕುತೂಹಲದ ಅಂಶಗಳನ್ನು ಹೊರ ಹಾಕಿದವು. ಈ ತಂಡ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ 'ಜಿಯೋಫಿಸಿಕಲ್ ಸರ್ವೆ' ನಡೆಸಿತು. ಸವಿವರ ನಕ್ಷೆಗಳ ತಯಾರಿಕೆ, ಭೂವಿಜ್ಞಾನ ಹಾಗೂ ಪುರಾತತ್ವಶಾಸ್ತ್ರದ ದೃಷ್ಟಿಕೋನದಿಂದ ಗಂಭೀರ ಅವಲೋಕನಗಳು ನಡೆದವು. ಉತ್ಖನನಕ್ಕೆ ಕಂದಕಗಳನ್ನು ಅಗೆದರು, ಆಳಕ್ಕೆ ಕೊರೆಯುವ ಕೋರ್ ಡ್ರಿಲ್ಲಿಂಗ್ ಕಾರ್ಯ ನಡೆಯಿತು. ಇವರ ಅಧ್ಯಯನ ಗುನುಂಗ್ ಪದಾಂಗ್ ಅತ್ಯಂತ ಸಂಕೀರ್ಣ ರಚನೆಯಾಗಿದೆ, ಒಮ್ಮೆಗೇ ಒಂದು ಕಾಲದಲ್ಲಿ ಕಟ್ಟಿ ನಿಲ್ಲಿಸಿದ್ದಲ್ಲ, ಹಲವು ಪದರುಗಳಲ್ಲಿ, ಬೇರೆಬೇರೆ ಕಾಲಮಾನದಲ್ಲಿ ನಿರ್ಮಾಣವಾದದ್ದು ಎಂದು ತೋರಿತು.

ನಮಗಿಂದು ಶಿಖರದಲ್ಲಿ ಕಾಣುವ ಶಿಲಾಕಂಬಗಳ ಜೋಡಣೆ, ಅಲ್ಲಿರುವ ಐದು ಮಾಳಿಗೆಗಳ ರಚನೆ ಮೂರ್ನಾಲ್ಕು ಸಾವಿರ ವರ್ಷಗಳಷ್ಟು ಹಳೆಯದು ಎಂದು ತಿಳಿಸಿದರು. ಈ ವಿಷಯದ ಬಗ್ಗೆ ಹಿಂದೆ ಇಲ್ಲಿ ಅಧ್ಯಯನ ಮಾಡಿದ ಡಿ.ಡಿ. ಬಿನ್‌ಟಾರ್ಟ (1982), ಬಿ.ಎಮ್. ಕಿಮ್ (1982) ಮತ್ತು ಟಿಮ್ ಪೆನೆಲಿಟಿ (2003) ಅವರ ಅಧ್ಯಯನದ ಫಲಿತಾಂಶಗಳಿಗೆ ಹೋಲಿಸಿದಾಗ, ಇವು ಬಹುಪಾಲು ಪರಸ್ಪರ ಹೊಂದಿ ಬಂದವು. ಹಾಗೆಂದೇ ಪುರಾತತ್ವಶಾಸ್ತ್ರಜ್ಞರು ಗುನುಂಗ್ ಪದಾಂಗ್ ಕ್ರಿಸ್ತಪೂರ್ವ ಕಾಲದಲ್ಲಿ ನಿರ್ಮಾಣವಾದ ಮೆಗಲಿತಿಕ್ ತಾಣವೆಂದು ಒಪ್ಪಿರುವರು.

ಆದರೆ ಗ್ರೌಡ್ ಪೆನೆಟ್ರೇಟಿಂಗ್ ರಡಾರ್, ಮಲ್ಟಿ–ಚಾನಲ್ ರೆಸಿಸ್ಟಿವಿಟಿ, ಸೀಸ್ಮಿಕ್ ಟೊಮೊಗ್ರಫಿ ಬಳಸಿ ನಡೆಸಿದ ಇವರ ಸರ್ವೆ, ಬೆಟ್ಟದ ಅಂತರಾಳದ ಕೌತುಕವನ್ನು ಹೊರಹಾಕಿತು. ಈ ಗುಡ್ಡದ ಒಡಲಾಳದಲ್ಲಿ ಮೆಟ್ಟಿಲು ಮೆಟ್ಟಿಲಿನ ಆಕಾರದ ಪಿರಮಿಡ್‌ನಂತಹ ಶಿಲಾರಚನೆ ಇರುವುದನ್ನು, ಅದರೊಳಗೆ ಹುಗಿದ ಪೊಳ್ಳುಭಾಗಗಳ ಮತ್ತು ಅವನ್ನು ಪರಸ್ಪರ ಜೋಡಿಸಿದ ಸುರಂಗಗಳ ಇರುವಿಕೆಯನ್ನು ಈ ಸರ್ವೆ ತೋರಿಸಿದ್ದು ದಿಗ್ಭ್ರಮೆ ಹುಟ್ಟಿಸಿತು.